183(2)

Reg No. M 1299 (Founded 1917) Daily & Weekly

CONQUER
GENERAL
SEXUAL
DEBILITIES
WITH
SHAKTI
SUDHA

ಸತ್ಯವಾದಿ
SATYAVADI

(ಅಕಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಂಶಿಯುರಿಂದ ಸ್ಥಾಪಿಸಲ್ಪಟ್ಟಿದು)

ಸಂವತ್ಸರ 28 ಸಂಚಿಕೆ 135] ಶುಕ್ರವಾರ 16—2—45 [3 ಪೈ

ಚಿನ್ನ, ಬೆಳ್ಳಿ, ಪಡವೆಗಳು,
ಅಮಕಂಪೆಗೆ ಖಾತ್ರಿ ಗುಣಕಾರಿ
ಡಿ ಸೆಂ ಟಿ ಸೈ ಡ್
ಮತ್ತು
ಝೂಂಡ ಕಂಪೆನಿಯ ಔಷಧಿಗಳು
ಬೇ ಕಾ ದ ರೆ
ಕಾಂತರಾಜ್ & ಕೋ
ರವೆ ಬೀದಿ, ಮೈಸೂರು.

ಮೈಸೂರು ಗೆಜಿಟ್ಟಿನ ದರ ಹೆಚ್ಚಿಸಲಾಯಿತು

ಮೈಸೂರು ಗೆಜಿಟ್ಟಿನ ದರವನ್ನು ರೂ. 12 ರಿಂದ 30 ಕ್ಕೆ ಹೆಚ್ಚಿಸಿದೆ.

ಗಾಂಧೀಜಿಯವರಿಗೆ ಸಲ್ಲಬೇಕು

ಡಾ|| ರಾಂಭಾವ್ ಭೋಗೆಯವರ ಪತ್ತೇಹಚ್ಚಿದವರಿಗೆ ರೂ. 4000 ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದರು. ಗಾಂಧೀಜಿಯವರ ಅಪ್ಪಣೆ ಮೇರೆ ತಾವು ಪೋಲೀಸರ ಅಧೀನರಾದ್ದರಿಂದ ಆ ರೂ. 4000 ನ್ನು ಗಾಂಧೀಜಿಯವರಿಗೆ ಕೊಡಬೇಕೆಂದು ಡಾಕ್ಟರರು ಬರೆದಿದಾರೆ.

ಕೊಂದರೆಂದು ದಸ್ತಗಿರಿ

ಬ್ಲಾಕ್ ಮ್ಯಾಜಿಕ್ಕಿನಲ್ಲಿ ನಿರತರಾಗಿದ್ದರೆಂದು 5 ಮಂದಿ ಸ್ತ್ರೀಯರನ್ನು ಕೊಂದರೆಂದು ಜಬ್ಬಾರಿನ 48 ಪ್ರಂದಿಯನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ರೈಲ್ವೇ ಛಾರ್ಜು ಹೆಚ್ಚಿಸುವುದಿಲ್ಲ

ಕೇಂದ್ರ ಸಭೆಯಲ್ಲಿ ಬಜೆಟ್ ಮಂಡಿಸಲಾಯಿತು. ಗತ ಸಾಲಿನಲ್ಲಿ ರೈಲಿನಿಂದ 42 ಕೋಟಿ ರೂ- ಉತ್ಪತ್ತಿಯಾಗಿಯಿತು. ಈ ವರ್ಷ ರೈಲ್ವೇ ಛಾರ್ಜು ಹೆಚ್ಚಿಸುವುದಿಲ್ಲ.

ಬಲೂರಿನ ಶೆ. ಅಬ್ದುಲ್ ರಹಿಮಾನ್ ಸಾಹೆಬರಿಗೆ 1914 ರಲ್ಲಿ ಕೊಟ್ಟಿದ್ದ ಅಪ್ಪರ್ ಸ್ಕೈಹುರಿ ಪ್ಲಾಪ್ ಸರ್ಟಿಫಿಕೇಟನ್ನು ವಜಾಮಾಡಿದೆ.

ಶ್ರೀ ಜಿ. ಬಿ. ಮಲ್ಲಾರಾಧ್ಯರು ನರಕಾಂಡ ಡೆವಲಪ್‌ಮೆಂಟು ಕಮಿಷನರಾಗಿ ನೇಮಿಸಲ್ಪಟ್ಟಿದ್ದಾರೆ.

ಗೋಬೆಲ್ಸ್ ಪತ್ರಿಕೆ ಬಂದಾಯಿತು

ಜರ್ಮನಿಯಲ್ಲಿ ಡಾ || ಗೋಬೆಲ್ಸ್ ಹೆಸರುವಾಸಿಯಾದದ್ದು ' ಡೆರ್ ಅರ್ಗಿಫ್ ' ಎಂಬ ವೃತ್ತಪತ್ರಿಕೆಯಿಂದ. ಇದರ ಸಂಪಾದಕೀಯ ಲೇಖನವನ್ನೆಲ್ಲಾ ಗೋಬಲ್ಸನೇ ಬರೆಯುತ್ತಿದ್ದನು. ಈ ವೃತ್ತಪತ್ರಿಕೆಯು ನಾಳೆಯಿಂದ ನಿಲ್ಲಿಸಲ್ಪಡುವುದು.

ಬೊಂಬಾಯಿನಲ್ಲಿ ಹಾಲಿನ ಕೋಡಿ

ಬೊಂಬಾಯಿನಲ್ಲಿ ಹೋಟಲುಗಳಿಗೆ ಮತ್ತು ಟೀ ಅಂಗಡಿಗಳಿಗೆ ನಿನ್ನೆಯಿಂದ ಹಾಲು ಮಾರಬಾರದೆಂದು ಸರ್ಕಾರಿ ಆಜ್ಞೆಯಾಗಿದೆ ಹಾಲಿನ ವ್ಯಾಪಾರಿಗಳು ಕೋಪದಿಂದ ಹಾಲನ್ನೆಲ್ಲಾ ಬೀದಿಯಲ್ಲಿ ಚೆಲ್ಲಿದರು. ಶ್ರೀಕೃಷ್ಣ ಪರಮಾತ್ಮನ ಶಾಲದಲ್ಲಿ ಹಾಲಿನ ಕೋಡಿ ಹರಿಯುವುದನ್ನು ನೋಡಿದ ಮುಂಬೈ ನಿವಾಸಿಗಳು ರಸ್ತೆ ಚರಂಡಿಗಳಲ್ಲಿ ಹಾಲು ಹರಿಯುವುದನ್ನು ನೋಡಿ ಬೆರಗಾದರು. ಮುಂಬೈಗೆ ಪ ತಿ ದಿವಸ 7400 ಟಿನ್ ಹಾಲು ಬೇಕಾಗುವುದು. ಇದರಲ್ಲಿ 3000 ಟನ್ನಿನಷ್ಟು ಹೋಟಲಿನವರೇ ಕೊಳ್ಳುವರು!

ಆಹಾರನಷ್ಟಕ್ಕೆ ಈ ಕವಾಡಿಗರನ್ನು ಏತಕ್ಕೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿನ ಮೇರೆ ಬೊಖದ್ದಮೆ ಹೂಡಬಾರದು.

ರಾಜಧಾನಿಯಲ್ಲಿ ನೀರಿನ ಸೌಲಭ್ಯಕ್ಕಾಗಿ

ಈಚೆಗೆ 12 ನೇ ತಾರೀಖಿನಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಜಧಾನಿಗೆ ಈಗ 4.2 ಮಿಲಿಯ ಗ್ಯಾಲನ್ ನೀರನ್ನು ಬಳಗೊಳದಲ್ಲಿ ಪಂಪ್ ಮಾಡುವುದನ್ನು 4.75 ಮಿಲಿಯ ಗ್ಯಾಲನ್ನಿಗೆ ಹೆಚ್ಚಿಸಬೇಕೆಂದೂ, ನೀರನ್ನು ದುಂದುಪಯೋಗ ಪಡಿಸದಿರಲು. ಯಾವ ಮನೆಯಲ್ಲಿ ಕೋಟು ಭಾವಿ ಇದೆಯೋ ಅಲ್ಲಿಗೆ ಮೀಟರು ಗಳನ್ನು ತುಮಕೂರು, ಚಿತ್ರದುರ್ಗದಿಂದ ಕಳಿಸಿ ಹಾಕಬೇಕೆಂದೂ ತೀರ್ಮಾನಿಸಲಾಯಿತು.

ಚಿಲ್ಲಿಯು ಜಪಾನಿನ ಮೇಲೆ ಹುಚ್ಚಾಡಿದೆ.

ಸಿಗ್ನಲ್ಡ್ ಲೈನಿನ ಭದ್ರವಾದ ರಕ್ಷಣಗಳನ್ನೆಲ್ಲಾ ಮಿತ್ರರು ಛೇದಿಸಿರುವರು.

ಗೋಕಿಕಪುರದ ಖಾದಿ ಭಂಡಾರವನ್ನು ಪೋಲೀಸಿನವರು ಖಾಲಿ ಮಾಡಿ ಬಾವುಟ, ಬ್ಯಾಡ್ಜ್—ಕಾಡಿಪಿಸಕ್ಕಗಳನ್ನು ತೆಗೆದುಕೊಂಡುಹೋದರು.

ತ್ರಿಮೂರ್ತಿಗಳು ಕ್ರಿಮಿಯಾದಲ್ಲಿ ಮಾಡಿದ ತೀರ್ಮಾನ ಸಮಾಧಾನಕರವಾಗಿಲ್ಲ. ಪೋಲೆಂಡ್ ತೀರ್ಮಾನ ಅಸಮಾಧಾನಕರವಾಗಿದೆ. ಇಟಲಿಯು ಕ್ಯಾಥಲಿಕ್ ಮತ ವಿಷಯದಲ್ಲಿ ಅಟ್ಲಾಂಟಿಕ್ ಛಾರ್ಟರ್ ಉದ್ದೇಶದಂತೆ ನಡೆಯಲಿಲ್ಲ. ಎಂದು ಪೋನರು ಬಾಡು ಹೇಳಿಕೆಕೊಟ್ಟರು.

ತ್ರಿಮೂರ್ತಿಗಳ ಸಮ್ಮೇಳನ

ತ್ರಿಮೂರ್ತಿಗಳು ಕ್ರಿಮಿಯಾದಲ್ಲಿನ ಯಾಲ್ಟಾದಲ್ಲಿ ಯುದ್ಧವನ್ನು ಬೇಗನೆ ಮುಗಿಸುವ ಯೋಜನೆ ಮಾಡಿದರು.

ಸಮ್ಮೇಳನವು 8 ದಿವಸ ರಾತ್ರೆ ಹಗಲು ನಡೆಯಿತು.

ಸಮ್ಮೇಳನವು 2 ನೇ ಜಾರ್ಜ್ ನಿಕೊಲಾಸಿನ ಬೇಸಿಗೆ ಶಾಲದ ಲಿವಡಿಯಾ ಅರಮನೆಯಲ್ಲಿ ನಡೆಯಿತು.

ವಾಷಿಂಗ್ಟನ್ನಿಂದ ರೂಸ್ವೆಲ್ಟರು ಯಾವ ಸಾಹಸದಲ್ಲಿ ಹೊರಟರೋ ಅದು ಗೊತ್ತಿಲ್ಲ. ಮಾಲ್ಟಾದಲ್ಲಿ ಒಂದು ಅಮೇರಿಕ ನೌಕೆಯಲ್ಲಿದ್ದರೆಂದು ಗೊತ್ತಾಗಿದೆ.

ರೂಸ್ವೆಲ್ಟರು ಮತ್ತು ಚರ್ಚಿಲ್ಲರ ಹೆಣ್ಣುಮಕ್ಕಳು ಅವರ ತಂದೆಯ ಜೊತೆಯಲ್ಲಿ ಈ ಸಮ್ಮೇಳನಕ್ಕೆ ಬಂದಿದ್ದರು.

ಯಾಲ್ಟದಲ್ಲಿ ವಾಚನಾಲಯಗಳೂ ಪುಸ್ತಕಶಾಲೆಗಳೂ ನಾಟಕಶಾಲೆಗಳೂ ಹೆಚ್ಚಾಗಿವೆ. ರಷ್ಯಾದಲ್ಲಿನ ಜನರ ಮೊದಲ 3 ಅವಶ್ಯಕತೆಗಳಲ್ಲಿ ಇದೊಂದು.

ಪ್ರಪಂಚದ ಬೆಲ್ಟಕಪ್ಪರಿಷ್ಟಿನ್ನು ನೋಡುವುದಕ್ಕೆ ಹೆಚ್ಚುವಾಗಿದೆ. ದ್ರಾಕ್ಷಿ ಬೆಳೆಯಾದರು ಜಾಸ್ತಿಗಿದೆ. ಪಾರ್ಕುಗಳಿವೆ.

ಚಿಕ್ಕಾ ಜೆಳ್ಳಿ ಧಾರಣೆ

ಸನರ್ 1 ಕ್ಕೆ	ರೂ. 50-0-0
ಚಿಕ್ಕ ಹೊಲ 1 ಕ್ಕೆ	73-0-0
ಬೆಳ್ಳಿ "	14-6

ಪ್ರ. ಪ್ರ. ಚುನಾವಣೆ

ಕೆಲ ವಿಷಯಗಳು

ಮೈಸೂರು ಸಂಸ್ಥಾನದಲ್ಲಿ ಸುಮಾರು 5 ಲಕ್ಷ ಮಂದಿ ಓಟರರುತ್ತಾರೆ.

ಚುನಾವಣೆ 4 ವರ್ಷಕ್ಕೊಂದ್ಹಾವರ್ತಿ ನಡೆಯುವುದು,

237 ಪ್ರಾದೇಶಿಕ ಜನಗಳಿಗೂ, 30 ಮುಸ್ಲಿಂ, 5 ಭಾರತ ಕ್ರೈಸ್ತ, 1 ಆಂಗ್ಲೋ ಇಂಡಿಯರ್, 1 ಯೂರೋಪಿಯರ್, 4 ನಿಮ್ನವರ್ಗ, (ಸ್ಪೆಷಲ್) 26 ನಿಮ್ನವರ್ಗ, 20 ವಿಶೇಷ ಹಿತ, 9 ಸ್ತ್ರೀಯರು, 11 ಇತರ ಕೈಗಾರಿಕೆ ಸ್ಥಾನಕ್ಕೆ ಚುನಾವಣೆಯಾಗುವುದು.

ಬೆಳಿಗ್ಗೆ 9 ಘಂಟೆಯಿಂದ 1 ಗಂಟೆಯವರಿಗೂ, ಸಾಯಂಕಾಲ 7 ಗಂಟೆಯವರೆಗೂ ಪೋಲಿಂಗ್ ನಡೆಯುವುದು.

ಓಟರ ಪಟ್ಟಿಯಲ್ಲಿಹೆಸರು 2-3 ಕಡೆ ಇದ್ದರೂ ಒಂದೇ ಕಡೆ ಓಟು ಮಾಡಬೇಕು.

ಓಟುಗಳನ್ನು ಒಬ್ಬರಿಗೇ ಕೊಡಬಹುದು, ಇಲ್ಲವೇ ಹಂಚಬಹುದು.

ಉಮೇದುವಾರರ ಹೆಸರಿನ ಮುಂದೆ ಕ್ರಾಸ್ ಗುರ್ತು ಮಾಡಬೇಕು.

ಎಚ್ಚರಿಕೆ!

ನಾಳೆ ದಿವಸ ಚುನಾವಣೆ

ನಿಮ್ಮ ಓಟನ್ನು

ಸರಿಯಾದ ಉಮೇದುವಾರಂಗೆ ಕೊಡಿ

Good Coffee

Sastry's Coffee Rooms
Chamarajapuram, Mysore

For Good Printing—

L. N. Press

Srirampet MYSORE

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸುತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಂಡಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ, ಬೆಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬೆಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯೂಗಿಯೂ ಬೆಕರಿಗೆ ಇಟ್ಟಿದೆ. ಇವ್ವ ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮಾರುವರು. ಮತ್ತು —

ವಲ್ಲಭದಾಸ್ ತೇಜ್ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ'ಬೀದಿ ಜಿ.ಟಿ. ಮದರಾಸ್.

ಮೈಸೂರು ರಣಜಿತ್ ಟಾಕೀಸಿನಲ್ಲಿ 5 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್

ಚಾರ್ಲಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ಗಂಟೆ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್

14—2—45 ರಿಂದ

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್

ಪಾತ್ರವಹಿಸಿರುವ

ತಹಸಿಲ್ದಾರ್

(ತೆಲುಗು ಚಿತ್ರ)

ಪ್ರತಿ ದಿನ 3 ಆಟಗಳು

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore

ಸತ್ಯವಾದಿ

— ವಾರದ ಸಂಚಿಕೆ —

ಪರಸ್ಥಳಕ್ಕೆ ವಾರ್ಷಿಕ ಚಂದಾ

ಅಂಚೆವೆಚ್ಚ ಸೇರಿ ರೂ. 1-12-0

TALK-A-TONE

(The Pioneer Film-mag of S. India)

Local Agent—D. Mahadev

Opera Talkies, Mysore